**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದ್‌ರಾವ್ ವೃತ್ತ, ಬೆಂಗಳೂರು**

**ಸಂಖ್ಯೆ: ಎಲ್‌ಆರ್‌ಓ/142/2015-16** **ದಿನಾಂಕ:07-12-2019**

## ಸುತ್ತೋಲೆ

**ವಿಷಯ:-** ಪದವೀಧರ ಫಾರ್ಮಸಿಸ್ಟ್(GP) ಹುದ್ದೆಯಿಂದ ಮುಖ್ಯ ಫಾರ್ಮಸಿಸ್ಟ್ (CP) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

**ಉಲ್ಲೇಖ:-** ಪದವೀಧರ ಫಾರ್ಮಸಿಸ್ಟ್ ವೃಂದ ಅಂತಿಮ ಜ್ಯೇಷ್ಠತಾ ಪಟ್ಟಿ ಸಂಖ್ಯೆ: ಎಲ್‌ಆರ್‌ಓ/55/2019-20 ದಿ:30.11.2019

******

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವೀಧರ ಫಾರ್ಮಸಿಸ್ಟ್ (Graduate Pharmacist) ವೃಂದದ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಜ್ಯೇಷ್ಠತಾ ಸಂಖ್ಯೆ: 01 ರಿಂದ 31 ರ ವರೆಗೆ ಉಲ್ಲೇಖಿತ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ. ಈ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಪದವೀಧರ ಫಾರ್ಮಸಿಸ್ಟ್ ಹುದ್ದೆಯಿಂದ ಮುಖ್ಯ ಫಾರ್ಮಸಿಸ್ಟ್ (Chief Pharmacist) ಹುದ್ದೆಗೆ ಪದೋನ್ನತಿ ನೀಡಲು ಕ್ರಮಕೈಗೊಳ್ಳುವ ಸಂಬಂಧ ಪ್ರಸ್ತುತ ಪದವೀಧರ ಫಾರ್ಮಸಿಸ್ಟ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಹಾಗೂ ಸದರಿ ಹುದ್ದೆಯಲ್ಲಿ ಕನಿಷ್ಠ 5 ವರ್ಷ ಸೇವೆ ಸಲ್ಲಿಸಿರುವ ನೌಕರರು ಈ ಕೆಳಕಂಡ ದಾಖಲಾತಿಗಳನ್ನು ದಿನಾಂಕ: 20-12-2019 ರೊಳಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಸಲ್ಲಿಸಲು ಸೂಚಿಸಿದೆ.

01. ನೇಮಕಾತಿ ಹೊಂದಿದ ಆದೇಶ ಪ್ರತಿ
02. ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗಿರುವ ಪ್ರತಿ
03. ಎಸ್.ಎಸ್.ಎಲ್.ಸಿ ಅಂಕ ಪಟ್ಟಿ
04. ಪರಿಶಿಷ್ಠ ಜಾತಿ/ಪಂಗಡದ ನೌಕರರು ಸಂಬಂದಿಸಿದ ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರ
05. ಪದವೀಧರ ಫಾರ್ಮಸಿಸ್ಟ್ ಹುದ್ದೆಗೆ ಪದೋನ್ನತಿ ಹೊಂದಿರುವ ಆದೇಶ ಪ್ರತಿಗಳು
06. ಕನ್ನಡ ವಿನಾಯಿತಿ ಪ್ರಮಾಣ ಪತ್ರ/ಅಕೌಟ್ಸ್ ಹೈಯರ್/ಜನರಲ್ ಲಾ-1/ಕಂಪ್ಯೂಟರ್ ಲಿಟ್ರಸಿ ಪ್ರಮಾಣ ಪತ್ರಗಳು
07. 59 ವರ್ಷ ವಯೋಮಿತಿ ಮೀರಿದ ನೌಕರರು ಗಣಕಯಂತ್ರ ತರಬೇತಿಯಿಂದ ವಿನಾಯಿತಿ ಪ್ರಮಾಣ ಪತ್ರ
08. ನೌಕರರ ವಿರುದ್ಧ ಇಲಾಖಾ ವಿಚಾರಣೆ/ನ್ಯಾಯಾಂಗ ತನಿಖೆ/ಲೋಕಾಯುಕ್ತ/ಭ್ರಷ್ಟಾಚಾರ ನಿಗ್ರಹ ದಳ ಪ್ರಕರಣ ಬಾಕಿ ಇಲ್ಲದಿರುವ ಬಗ್ಗೆ ದೃಡೀಕರಣ ಪತ್ರ
09. ಉನ್ನತ ವ್ಯಾಸಂಗದಲ್ಲಿ ತೇರ್ಗಡೆಯಾದ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರ
10. ಕಳೆದ ಐದು (05) ವರ್ಷಗಳ ರಹಸ್ಯ ವರದಿ (2014-15, 2015-16, 2016-17, 2017-18 ಮತ್ತು 2018-19) (ವಿಶೇಷ ಕಾರ್ಯನಿರ್ವಾಹಣ ವರದಿ ಪರಿಗಣಿಸುವುದಿಲ್ಲ)

ನಿರ್ದೇಶಕರು,
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು

**ಇವರಿಗೆ ಸೂಕ್ತ ಕ್ರಮಕ್ಕಾಗಿ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ:**

01. ಮಾನ್ಯ ಆಯುಕ್ತರ ಆಪ್ತ ವಿಭಾಗ, ಆರೋಗ್ಯ ಮತ್ತು ಕು.ಕ. ಸೇ.ನಿರ್ದೇಶನಾಲಯ, ಬೆಂಗಳೂರು.
02. ಮಾನ್ಯ ನಿರ್ದೇಶಕರ ಆಪ್ತ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿರ್ದೇಶನಾಲಯ, ಬೆಂಗಳೂರು

03. ವಿಭಾಗೀಯ ಸಹ ನಿರ್ದೇಶಕರು, _______________ ವಿಭಾಗ,
04. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
05. ಡೀನ್ ಮತ್ತು ನಿರ್ದೇಶಕರು, ____________________ ವೈದ್ಯಕೀಯ ವಿಜ್ಞಾನ ಸಂಸ್ಥೆ,__________
06. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು _________________________ ಜಿಲ್ಲೆ
07. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ____________________ ಜಿಲ್ಲೆ
08. ಪ್ರೋಗ್ರಾಂ ಆಫೀಸರ್, ಗಣಕಯಂತ್ರ ವಿಭಾಗ, ಆರೋಗ್ಯ ಮತ್ತು ಕು.ಕ.ಸೇ.ನಿ, ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
09. ನಿರ್ದೇಶನಾಲಯದ ಸೂಚನಾ ಫಲಕ,
10. ಕಚೇರಿ ಪ್ರತಿ.